ಅಭಿಮಾನಿಗಳು ಹುಚ್ಚೆದ್ದು ಕುಣಿಯುತ್ತಿದ್ದಾರೆ. ಮಾಯಾ ಬೆಳಕಿನ ಸೆಟ್ಟಿಂಗ್‌ನಲ್ಲಿ ಅಪ್ಸರೆಯಂತೆ ಕಾಣುತ್ತಾಳೆ. ಹಾಡುವವಳ ಹೆಸರು ಕ್ಲಿಯೊ. ಕಲ್ಯಾಣಿಯ ಅಪಭ್ರಂಶ ರೂಪವಿರಬೇಕು. ಯೂಟ್ಯೂಬ್ ಚಾನೆಲ್ಲಿನ ಮುಖ್ಯ ಕಚೇರಿ ಬ್ಲ್ಯಾಕ್ ಫಾರೆಸ್ಟ್ ಸಿಟಿಯಲ್ಲಿರುವುದನ್ನು ಖಚಿತಪಡಿಸಿದರು. ಅವರಿಗೆ ಸರಿಯಾಗಿ ನೆನಪಿದೆ ಕಲ್ಯಾಣಿಯ ಗಂಡ ಕೆಲಸ ಮಾಡುತ್ತಿದ್ದದ್ದು ಅಲ್ಲೇ. ತನ್ನ ವಾನಪ್ರಸ್ಥ ನಿರಾಳವಾಗಿರಲು, ಹಿಡಿದುಕೊಂಡ ಅವಳಿಂದ ಬಿಡುಗಡೆಯಾಗಬೇಕು. ಅವಳನ್ನು ನೋಡಿದ ಬಳಿಕವೇ ಬಿಡುಗಡೆ ಎಂದು ಅವರಿಗೆ ಖಾತ್ರಿಯಾಗಿ ಹೋಯಿತು. ಸುಬ್ರೊ ಕರೆದಾಗ ಅವರು ಒಪ್ಪಿದ್ದು ಈ ಕಾರಣಕ್ಕಾಗಿ. ಮೊದಲೆರಡು ವೀಕೆಂಡ್‌ನಲ್ಲಿ ಸುಬ್ರೊ, ಅವರನ್ನು ಕಾರಿನಲ್ಲಿ ಸುತ್ತಾಡಿಸಿ, 'ನಿನಗೆ ನೋಡಬೇಕೆನಿಸಿದ ಯಾವುದಾದರೂ ಸ್ಥಳವಿದ್ದರೆ ಹೇಳು; ಭೇಟಿಯಾಗಬೇಕಿದ್ದ ಪರಿಚಿತರು ಇದ್ದರೆ ತಿಳಿಸು ಹೋಗಿ ಬರೋಣ' ಎಂದಿದ್ದ.

'ಕಾಲೇಜಿನ ನನ್ನ ಸಹಪಾಠಿ ಕಲ್ಯಾಣಿ ಕುಲಕರ್ಣಿ ಬ್ಲ್ಯಾಕ್ ಫಾರೆಸ್ಟ್‌ಲಿ ಅದಾಳಂತ. ಅವಳನ್ನೊಮ್ಮೆ ಕಾಣ್ಬೇಕು...'

'ಅಪ್ಪಾ ಛೆಂದ್ ಹಾಡ್ತಿದ್ರಲ್ಲ ಅವ್ರು. ಅವರ ಪರಿಚಯವಾಗಿತ್ತು. ನಿನ್ನ ನೆನಪು ಮಾಡ್ಕಂಡ್ರು. ಅವರು ಎರಡು ವರ್ಷದ ಹಿಂದೆ ತೀರಿ ಹೋದ್ರು ಅಂತ ಒಂದು ಸುದ್ದಿ ಬಂದಿತ್ತು'.

ರಾವ್ ನಂಬಲಿಲ್ಲ. ಸುಳ್ಳು ಸುದ್ದಿಯಿರಬಹುದು. ತನ್ನ ಮತ್ತು ಕಲ್ಯಾಣಿಯ ಪೂರ್ವಾಶ್ರಮ ಸಂಬಂಧದ ಬಗ್ಗೆ ಅವನಿಗೆ ಅಲ್ಲ ಸಲ್ಲದ ಸಂದೇಹ ಬಂದಿರಬಹುದು. ಕಲ್ಯಾಣಿ ಏನೇನು ಹೇಳಿದ್ದಾಳೊ. ಅವಳ ಭೇಟಿ ತಪ್ಪಿಸಲು ಸುಳ್ಳು ಹೇಳುತ್ತಿದ್ದಾನೆ. ಅಗಲಿದ ತಾಯಿಯ ಬಗ್ಗೆ ಏಕಪತ್ನಿ ವ್ರತಸ್ಥ ತಾನು ನಿಷ್ಠೆಯಿಂದಿರಬೇಕೆಂದು ಎಲ್ಲ ಮಕ್ಕಳಂತೆ ಯೋಚಿಸಿದ್ದಾನೆ. ತಾನು ಸಂಬಂಧ ಮುಂದುವರಿಸಲು ಬಂದವನಲ್ಲ ಮುಕ್ತಾಯ ಮಾಡಲು ಎಂದು ಮಗನಿಗೆ ಹೇಗೆ ತಿಳಿಹೇಳುವುದೆಂದು ಅವರಿಗೆ ಹೊಳೆಯಲಿಲ್ಲ. 'ಇತ್ತೀಚೆಗೆ ಆಕಿ ಕಛೇರೀಲಿ ಹಾಡಿದ್ದು ಯೂಟ್ಯೂಬ್‌ಲ್ಲಿ ನೋಡಿದೀನಿ ನಾನು. ಆಕಿ ಹೆಸರು ಬದಲಿಸಿ ಕ್ಲಿಯೊ ಅಂತ ಇಟ್ವಾರ'. 'ಕ್ಲಿಯೋನಾ! ಅವಳ ಪುರಾಣ ಕೇಳುವಂತೆ. ನನ್ನ ಮಾತಿನಲ್ಲಿ ನಂಬಿಕೆ ಇಲ್ಲಾಂದ್ರ' ಸುಬ್ರೊ ಮನೆಯಿಂದ ಎರಡು ಮೈಲಾಚೆಯ ಸಾರ್ವಜನಿಕ ಗ್ರಂಥಾಲಯಕ್ಕೆ ಕಾರು ಓಡಿಸಿದ. ಸ್ವರ್ಗದಂತಹ ನಿಸರ್ಗದ ಪೇಯಿಂಟಿಂಗ್ ಲೋಕ ಒಳಹೊಕ್ಕು ಸವಾರಿ ಮಾಡಿದಂತಿತ್ತು. ಲೈಬ್ರರಿಯ ಸದಸ್ಯನಾದ ಸುಬ್ರೊನ ಸ್ನೇಹಿತ ಫ್ರೆಡ್ರಿಕ್ ಅಲ್ಲಿ ಕೆಲಸಕ್ಕಿದ್ದಾನೆ. ದಂತಕತೆಯಾದ ಕ್ಲಿಯೊಳ ಜೀವನಚರಿತ್ರೆ ಅಲ್ಲಿದೆ. ಫ್ರೆಡ್ರಿಕ್ ಹರಕುಮುರಕು ಇಂಗ್ಲಿಷ್ ಮಾತಾಡುತ್ತಾನೆ. ಸುಬ್ರೊನ ಸಹವಾಸದಲ್ಲಿ ಫ್ರೆಡ್ರಿಕ್ ಒಂದೆರೆಡು ಕನ್ನಡ ಪದಗಳನ್ನು ಕಲಿತಿದ್ದ. 'ನಮಸ್ಕಾರ್' ಎಂದು ಫ್ರೆಡ್ರಿಕ್ ಕೈ ಜೋಡಿಸಿ ಸ್ವಾಗತಿಸಿದ ಪರಿಗೆ ರಾವ್ ಪರಮಾಪ್ತ ಆನಂದದಿಂದ ಪುಲಕಿತರಾದರು. ಕ್ಲಿಯೊ ಕುರಿತು ಮಾಹಿತಿ ಸಂಗ್ರಹಿಸಲು ಬಂದಿರುವುದಾಗಿ ಸುಬ್ರೊ ತಿಳಿಸಿದ. ಫ್ರೆಡ್ರಿಕ್ ನೀಲಿ ಬಾಯಿಂಡಿನ ದಪ್ಪ ಆದರೆ ಹಗುರಾದ ಪುಸ್ತಕವನ್ನು ಕೌಂಟರ್ ಡೆಸ್ಕಿನ ಮೇಲಿರಿಸಿದ. ಸುಬ್ರೊ ಪುಟ ತಿರುವಿ,'ಇದು ಜರ್ಮನ್ ಭಾಷೆಯಲ್ಲಿದೆ. ಅಪ್ಪ ಓದಲಾರರು' ಎಂದ. ಫ್ರೆಡ್ರಿಕ್ ಎರಡೂ ಭುಜ ಕುಣಿಸಿ, ಕೆಳ ತುಟಿ ಮಡಚಿ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದ.

ಸುಬ್ರೊ, 'ನಿನಗೆ ಗೊತ್ತಿರುವಷ್ಟು ಹೇಳು' ಎಂದ. ಕ್ಲಿಯೊ ತವರು ಬ್ಲ್ಯಾಕ್‌ಫಾರೆಸ್ಟೆಂದೂ ಅವಳ ಮನೆ ಸಂಚಾರಿ ಬಸ್ಸೆಂದೂ ಅವಳಿಗೆ ಹಲವು ತಾಯಂದಿರು ಇರುವುದಾಗಿಯೂ ತಾನು ಕೇಳಿದ ಚೂರುಪಾರು ವಿವರಗಳನ್ನು ಹೇಳಿದ. ಅವನ ನಿರೂಪಣೆಯಲ್ಲಿ ಅವಳೊಬ್ಬ ಅತಿಮಾನುಷ ವ್ಯಕ್ತಿಯಾಗಿದ್ದಳು. ರಾವ್ ಅರ್ಥವಾಗದೆ ಮಗನ ಮುಖ ನೋಡಿದರು. ಫ್ರೆಡ್ರಿಕ್ ಅವರ ಗೊಂದಲವನ್ನು ಗಮನಿಸಿ ಸಂಗೀತ ಕಛೇರಿ ಪ್ರಸ್ತುತಿಗೆ ಅವಳು ಸದಾ ಸಂಚರಿಸುವುದರಿಂದ ಅವಳಿಗೇ ಮೀಸಲಾದ ಬಸ್ಸಿನಲ್ಲಿ ತಂಗುವುದು ಅವಳಿಗೆ ಅನಿವಾರ್ಯವೆಂದೂ ಅವಳ ಎಲ್ಲ ಅಭಿಮಾನಿ ತಾಯಂದಿರು ಕ್ಲಿಯೊ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಕೂಸೆಂದು ಭಾವಿಸಿರುವುದಾಗಿಯೂ ಅವಳ ರಾಗಗಳು ಬ್ಲ್ಯಾಕ್ ಫಾರೆಸ್ಟಿನ ಕಣಿವೆಯಲ್ಲಿ ಹುಟ್ಟಿರುವುದರಿಂದ ಅದೇ ಅವಳ ತವರೆಂದು ತಿಳಿಯಲಾಗಿದೆಯೆಂದೂ ಸ್ಪಷ್ಟೀಕರಿಸಿದ. ರಾವ್